# <u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>

**ಎಸ್.ಸಿ.ನಂ:** ೭೧/೨೦೨೪
**ಸಿಡಬ್ಲೂ:** ೦೫
**ಪಿಡಬ್ಲೂ:** ೦೩

ಸಾಕ್ಷಿದಾರರ ಹೆಸರು : ನಿಂಗಪ್ಪ ಸೋಮಜಾಳ

ತಂದೆಯ ಹೆಸರು : ಶಂಕರಪ್ಪ

ವಯಸ್ಸು : ೬೫ ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಚಿಕ್ಕಸಿಂದಗಿ.

- - - - -

## <u>ಇಂದು ದಿನಾಂಕ 03.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

## <u>ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರಿಂದ:</u>

೧) ಚಾ.ಸಾ.೧ ಭೀಮರಾಯ ನನ್ನ ತಮ್ಮನಾಗಬೇಕು. ಅವರ ಮಗಳು ಲಕ್ಷ್ಮಿಯನ್ನು ಲೋಣಿ ಬಿ.ಕೆ. ಗ್ರಾಮದ ಆರೋಪಿ ನಂ.೧ ರವರಿಗೆ ಮದುವೆ ಮಾಡಿಕೊಡಲಾಗಿತ್ತು. ಮೃತ ಲಕ್ಷ್ಮಿಯ ಕೊಲೆಯು ಆರೋಪಿ ನಂ.೧ ರವರ ಮನೆಯಲ್ಲಿ ಈಗ ಎರಡು ವರ್ಷಗಳ ಹಿಂದೆ ಆಗಿರುತ್ತದೆ. ಇದರ ಬಗ್ಗೆ ಪೋಲೀಸರು ಪಂಚನಾಮೆ ಮಾಡಲು ನನ್ನನ್ನು ಮತ್ತು ಚಾ.ಸಾ.೬ ರವರನ್ನು ದಿನಾಂಕ ೧೯.೦೮.೨೦೨೩ ರಂದು ಬೆಳಿಗ್ಗೆ ೦೭.೩೦-೦೮.೦೦ ಘಂಟೆಗೆ ಝಳಕಿ ಪೋಲೀಸ ಠಾಣೆಗೆ ಕರೆಸಿದ್ದರು.

೨) ಅಲ್ಲಿ ೧ ನೇ ಆರೋಪಿ ಪೋಲೀಸರ ವಶದಲ್ಲಿದ್ದು, ಆರೋಪಿಯು ತನ್ನ ಜೊತೆ ಬಂದರೆ ಕೊಲೆ ಮಾಡಿದ ಸ್ಥಳ ಮತ್ತು ಕೊಲೆ ಮಾಡಲು ಬಳಸಿದ್ದ ಕಲ್ಲುಗುಂಡನ್ನು ತೋರಿಸುತ್ತೇನೆ ಎಂದು ಹೇಳಿದನು. ನಂತರ ೧ ನೇ ಆರೋಪಿಯು ನಮ್ಮನ್ನು ಜೀಪಿನಲ್ಲಿ ಬಿ.ಕೆ. ಲೋಣಿ ಗ್ರಾಮದಲ್ಲಿರುವ ತನ್ನ ಸ್ವಂತ ಮನೆಗೆ ಕರೆದುಕೊಂಡು ಹೋಗಿ, ಮನೆಯ ಒಳಗಡೆ ಹಾಲನಲ್ಲಿ ಇಲ್ಲೇ ಕೊಲೆ ಮಾಡಿರುತ್ತೇನೆ ಎಂದು ಜಾಗಾ

**ಎಸ್.ಸಿ.ನಂಃ** ೭೧/೨೦೨೪
**ಸಿಡಬ್ಲೂಃ** ೦೫
**ಪಿಡಬ್ಲೂಃ** ೦೩

ತೋರಿಸಿದ. ಇದರ ಬಗ್ಗೆ ಪೋಲೀಸರು ಬೆಳಿಗ್ಗೆ **೦೮.೩೦** ರಿಂದ **೦೯.೦೦** ಘಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತಾರೆ.

೩) ಈಗ ನಾನು ಆರೋಪಿ ತೋರಿಸುವ ಗುನ್ಹಾ ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗ ನಿ.ಪಿ.೮ ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.೮(ಎ) ಎಂದು ಗುರುತಿಸಲಾಯಿತು. ಇನ್ನೊಬ್ಬ ಸಾಕ್ಷಿದಾರರಾದ ಚಾ.ಸಾ.೬ ಇವರ ಸಹಿಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.೮(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಒಂದು ಪೋಟೋ ನೋಡಿ ಗುರುತಿಸಿದ್ದು, ಅದನ್ನು ಈಗ ನಿ.ಪಿ.೯ ಎಂದು ಗುರುತಿಸಲಾಯಿತು.

೪) ನಂತರ ೧ನೇ ಆರೋಪಿಯು ಮನೆಯ ಹಿಂದುಗಡೆ ಇರುವ ಸ್ಟೇರಕೇಸ್ ಕೆಳಗಡೆ ಕಂಟಿಯಲ್ಲಿ ಮುಚ್ಚಿಟ್ಟಿದ್ದ ಒಂದು ರಕ್ತ ಹತ್ತಿದ ಗುಲಾಬಿ ಬಣ್ಣದ ಶರ್ಟು, ಒಂದು ರಕ್ತ ಹತ್ತಿದ ಬಿಳಿ ಬನಿಯನ್, ರಕ್ತ ಹತ್ತಿದ ಒಂದು ಬೂದು ಬಣ್ಣದ ಪ್ಯಾಂಟು, ರಕ್ತ ಹತ್ತಿದ ನೀಲಿ ಬಣ್ಣದ ಅಂಡರವೆಯರ್, ರಕ್ತ ಹತ್ತಿದ ಒಂದು ಕಲ್ಲುಗುಂಡು ಇವುಗಳನ್ನು ಹಾಜರುಪಡಿಸಿದ್ದು, ಅದರ ಬಗ್ಗೆ ಪೋಲೀಸರು ಬೆಳಿಗ್ಗೆ **೦೯.೩೦** ರಿಂದ **೧೧.೩೦** ಘಂಟೆಯವರೆಗೆ ಪಂಚನಾಮೆ ಮಾಡಿ ಜಪ್ತಿ ಮಾಡಿಕೊಂಡಿರುತ್ತಾರೆ.

೫) ಈಗ ನಾನು ಆರೋಪಿ ಹಾಜರುಪಡಿಸಿದ ವಸ್ತುಗಳ ಜಪ್ತಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗ ನಿ.ಪಿ.೧೦ ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.೧೦(ಎ) ಎಂದು ಗುರುತಿಸಲಾಯಿತು. ಇನ್ನೊಬ್ಬ ಸಾಕ್ಷಿದಾರರಾದ ಚಾ.ಸಾ.೬ ಇವರ ಸಹಿಯನ್ನು ನಿ.ಪಿ.೧೦(ಬಿ)

**ಎಸ್.ಸಿ.ನಂಃ** ೭೧/೨೦೨೪
**ಸಿಡಬ್ಲೂಃ** ೦೫
**ಪಿಡಬ್ಲೂಃ** ೦೩

ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಒಂದು ಪೋಟೋವನ್ನು ನಿ.ಪಿ.೧೧ ಎಂದು ಗುರುತಿಸಲಾಯಿತು.

೬) ಈಗ ಎಫ್.ಎಸ್.ಎಲ್. ಸೀಲ್ ಒಡೆದು, ಜಪ್ತಾದ ವಸ್ತುಗಳನ್ನು ನೋಡುತ್ತಿದ್ದು, ಅವುಗಳ ಪೈಕಿ ಒಂದು ಶರ್ಟ, ಒಂದು ಬನಿಯನ್, ಒಂದು ಪ್ಯಾಂಟು, ಒಂದು ಅಂಡರವೆಯರ ಮತ್ತು ಒಂದು ಖಡ್ಡಿಕಲ್ಲು ಇವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ.೧೧ ರಿಂದ ೧೫ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಕೆ.ಕೆ.ಕೆ., ವಕೀಲರಿಂದ ಆರೋಪಿತರ ಪರವಾಗಿಃ</u>**

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಕಲಂ ೨೩೧(೨) ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿ ಹಾಕಿಕೊಂಡು ಪಾಟಿ ಸವಾಲಿಗಾಗಿ ಸಮಯ ಕೋರಿದ್ದರಿಂದ ಪಾಟಿ ಸವಾಲಿಗಾಗಿ ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೇ. ಸರಿ ಅದೆ.**

೪ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.